ಈ) ಈ ಯೋಜನೆಯಿಂದ ಜಿಲ್ಲೆಯ ಹಗೂ ಸಉತ್ತಮುತ್ತಲಿನ ಎಷ್ಟು ಗ್ರಾಮಗಳು ಮುಳುಗಡೆಯಾಗಲಿವೆ:

ಉ) ಪುನರ್ವಸತಿ ಕೆಂದ್ರ ನಿರ್ಮಾಣ ಕಾಮಗಾರಿಗೆ ಎಷ್ಟು ಹಣ ನಿಗದಿಪಡಿಸಲಾಗಿದೆ: ಇದುವರೆಗೆ ಬಿಡುಗಡೆಯಾದ ಹಣ ಎಷ್ಟು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಶಿವಮೊಗ್ಗ ಜಿಲ್ಲೆಯ ತುಂಗಾ ಅಣೆಕಟ್ಟು ಯೋಜನೆಯು 1946 ರಲ್ಲಿ ಪ್ರಾರಂಭಿಸಿ 1956 ರಲ್ಲಿ ಪೂರ್ಣಗೊಂಡಿರುತ್ತದೆ. ಈ ಯೋಜನೆಯಿಂದ 120 ಮನೆಗಳು ಮುಳುಗಡೆಯಾಗಿದ್ದು. ಈ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲಾಗಿದೆ.

ಆ) ಇದೆ.

ಇ) ಮಾರ್ಪಾಡಿತ ಯೋಜನಾ ವರದಿಯಂತೆ ಅಂದಾಜು ವೆಚ್ಚವು ರೂ. 1052.33 ಕೋಟಿ. ಯೋಜನೆಯ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿವೆ. ಈ ಯೋಜನೆಯನ್ನು 2005 ರ ಅಂತ್ಯದೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಈ) ಶಿವಮೊಗ್ಗ ಜಿಲ್ಲೆಯ ಎರಡು ಗ್ರಾಮಗಳು ಮುಳುಗಡೆಯಿಂದ ಭಾಗಶಃ ತೊಂದರೆಗೊಳಗಾಗುತ್ತವೆ ಮತ್ತು ಮೂರು ಗ್ರಾಮಗಳ 214ಎ–07 ಗುಂ ಜಮೀನುಗಳು ಮುಳುಗಡೆಯಾಗುತ್ತವೆ ಚಿಕ್ಕಮಗಳೂರು ಜಿಲ್ಲೆಯ ಎರಡು ಗ್ರಾಮಗಳ 105ಎ.– 22ಗುಂ. ಜಮೀನುಗಳು ಮುಳುಗಡೆಯಾಗುತ್ತವೆ.

ಉ) ಪುನರ್ವಸತಿ ಕೆಂದ್ರ ನಿರ್ಮಾಣ ಕಾಮಗಾರಿಗೆ ರೂ. 350.00 ಲಕ್ಷ ನಿಗದಿಪಡಿಸಲಾಗಿದೆ. ಇದುವರೆಗೆ ಪುನರ್ವಸತಿ ಕೆಂದ್ರದ ನಿರ್ಮಾಣ ಕಾರ್ಯಕ್ಕಾಗಿ ಯಾವುದೇ ವೆಚ್ಚ ಭರಿಸಲಾಗಿಲ್ಲ.

**ರಾಷ್ಟ್ರದಲ್ಲಿ ರೈತ ಸಂಪರ್ಕ ಕೇಂದ್ರಗಳಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ**

4198 (4948) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ರೈತ ಸಂಪರ್ಕ ಕೆಂದ್ರಗಳ ಸಂಖ್ಯೆ ಎಷ್ಟು:

ಆ) ಪ್ರತಿಯೊಂದು ರೈತ ಸಂಪರ್ಕ ಕೇಂದ್ರಕ್ಕೆ ಮಂಜೂರಾದ ಹುದ್ದೆಗಳು ಯಾವುವು:

ಇ) ರೈತ ಸಂಪರ್ಕ ಕೇಂದ್ರಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು: (ಹುದ್ದವಾರು, ಜಿಲ್ಲಾವಾರು ವಿವರ ಒದಗಿಸುವುದು)

ಈ) ಈ ರೈತ ಸಂಪರ್ಕ ಕೇಂದ್ರಗಳಲ್ಲಿ ತೋಟಗಾರಿಕೆ, ಕೃಷಿ, ರೇಷ್ಮೆ ಮತ್ತು ಪಶುಸಂಗೋಪನೆ ವಿಸ್ತರಣಾ ಯೋಜನೆಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆಯೆ:

ಉ) ಈ ಕೇಂದ್ರಗಳಿಗೆ ಭೂಮಿ, ಕೃಷಿ ಉತ್ಪನ್ನ ಮಾರುಕಟ್ಟೆ, ಸಹಕಾರ ಸಂಘಗಳು ಮತ್ತು ಕೃಷಿ ವಿಶ್ವವಿದ್ಯಾಲಯದ ಜೊತೆ ಸಂಪರ್ಕವನ್ನು ಜೋಡಿಸಲಾಗಿದೆಯೇ:

ಊ) ರಾಜ್ಯದ ಎಷ್ಟು ಕೇಂದ್ರಗಳಲ್ಲಿ ಈ ಜೋಡಣೆ ಆಗಿದೆ? (ಜಿಲ್ಲಾವಾರು ವಿವರ ಒದಗಿಸುವುದು)

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ರಾಜ್ಯದಲ್ಲಿ 745 ರೈತ ಸಂಪರ್ಕ ಕೇಂದ್ರಗಳಿವೆ.

ಆ) ಪ್ರತಿಯೊಂದು ರೈತ ಸಂಪರ್ಕ ಕೇಂದ್ರಕ್ಕೆ ಮಂಜೂರಾದ ಹುದ್ದೆಗಳು ಇಂತಿವೆ.

1. ಕೃಷಿ ಅಧಿಕಾರಿ – 1
2. ಸಹಾಯಕ ಕೃಷಿ ಅಧಿಕಾರಿ – 0 ರಿಂದ 4
3. ಕೃಷಿ ಸಹಾಯಕರು – 2 ರಿಂದ 14

ಇ) ಒಟ್ಟು 856 ಹುದ್ದೆಗಳು ಖಾಲಿ ಇವೆ. ಹುದ್ದೆವಾರು ಜಿಲ್ಲಾವಾರು ಖಾಲಿ ಇರುವ ಹುದ್ದೆಗಳ ವಿವರಗಳನ್ನು ಅನುಬಂಧ – 1 ರಲ್ಲಿ ಲಗತ್ತಿಸಿದೆ.

ಈ) ಹೌದು.

ಉ) ಕೃಷಿ ವಿಶ್ವವಿದ್ಯಾನಿಲಯ, ಕೃಷಿ ಉತ್ಪನ್ನ ಮಾರುಕಟ್ಟೆ, ಸಹಕಾರ ಸಂಘಗಳ ಜೊತೆಗೆ ಕ್ರಿಯಾತ್ಮಕ ಸಂಪರ್ಕ ಜೋಡಿಸಲಾಗಲಿದ್ದು, ಪ್ರಾಯೋಗಿಕವಾಗಿ ಭೂಮಿ ಕಾರ್ಯಕ್ರಮವನ್ನು ಐದು ಕೇಂದ್ರಗಳಲ್ಲಿ ಅಳವಡಿಸಲು ಯೋಜಿಸಿದೆ.

ಊ) ಕೃಷಿ ತಾಂತ್ರಿಕತೆಗಳಿಗೆ ಸಂಬಂಧಿಸಿದಂತೆ ಎಲ್ಲಾ ರೈತ ಸಂಪರ್ಕ ಕೇಂದ್ರಗಳ ಮುಖ್ಯಸ್ಥರುಗಳು ಪ್ರತಿ ಎರಡು ತಿಂಗಳಿಗೊಮ್ಮೆ ಕೃಷಿ ವಿಶ್ವವಿದ್ಯಾಲಯಗಳ ತಜ್ಞರುಗಳೊಡನೆ ಸಮಾಲೋಚಿಸಲು ಪ್ರತಿ ಜಿಲ್ಲಾ ಮಟ್ಟದಲ್ಲಿ ತಾಂತ್ರಿಕ ಸಮಾವೇಶಗಳನ್ನು ಏರ್ಪಡಿಸಲಾಗುತ್ತಿದೆ. ಮಾರುಕಟ್ಟೆ ಮಾಹಿತಿ ಒದಗಿಸುವ ದಿಸೆಯಲ್ಲಿ ರೈತ ಮಿತ್ರ ವೆಬ್ ಸೈಟ್‌ನ್ನು ಮಾರಾಟ ವಾಹಿನಿ ವೆಬ್ ಸೈಟ್‌ನೊಂದಿಗೆ ಸಂಪರ್ಕಿಸಲಾಗಿದೆ. ಸದರಿ ಸೌಲಭ್ಯವನ್ನು ಹಾಲಿ ಇಂಟರ್ನೆಟ್ ಸಂಪರ್ಕ ಪಡೆದಿರುವ 56 ಕೇಂದ್ರಗಳಲ್ಲಿ ಪಡೆಯಲಾಗುತ್ತಿದೆ. ಜಿಲ್ಲಾವಾರು ಇಂಟರ್ನೆಟ್ ಸೌಲಭ್ಯ ಪಡೆದ ಸ್ಥಳಗಳ ವಿವರಗಳನ್ನು ಅನುಬಂಧ –2 ರಲ್ಲಿ ನೀಡಲಾಗಿದೆ.

ಅನುಬಂಧ – 1

**ರೈತ ಸಂಪರ್ಕ ಕೇಂದ್ರಗಳಲ್ಲಿ ಖಾಲಿ ಇರುವ ಹುದ್ದೆಗಳ ಜಿಲ್ಲಾವಾರು ವಿವರ**

| 1 | 2 | 3 | 4 | 5 | 6 | 7 |
|---|---|---|---|---|---|---|
| ಕ್ರ ಸಂ | ಜಿಲ್ಲೆ | ಹೋಬಳಿಗಳ ಸಂಖ್ಯೆ | ರೈತ ಸಂಪರ್ಕ ಕೇಂದ್ರಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳು ಕೃಷಿ ಅಧಿಕಾರಿ | ಸಹಾಯಕ ಕೃಷಿ ಅಧಿಕಾರಿ | ಕೃಷಿ ಸಹಾಯಕ |
| 1. | ಬೆಂಗಳೂರು (ನ) | 17 | 17 | 2 | 13 | 6 |
| 2. | ಬೆಂಗಳೂರು (ಗ್ರಾ) | 35 | 35 | 15 | 9 | 4 |
| 3. | ಕೋಲಾರ | 53 | 53 | 28 | 38 | 43 |
| 4. | ತುಮಕೂರು | 50 | 50 | 19 | 19 | 0 |
| 5. | ಶಿವಮೊಗ್ಗ | 40 | 40 | 20 | 12 | 0 |
| 6. | ಚಿತ್ರದುರ್ಗ | 22 | 22 | 4 | 3 | 0 |
| 7. | ದಾವಣಗೆರೆ | 24 | 24 | 10 | 4 | 0 |
| 8. | ಮೈಸೂರು | 33 | 33 | 11 | 11 | 0 |
| 9. | ಚಾಮರಾಜನಗರ | 16 | 16 | 9 | 8 | 1 |
| 10. | ಮಂಡ್ಯ | 31 | 31 | 17 | 6 | 32 |

| 1 | 2 | 3 | 4 | 5 | 6 | 7 |
|---|---|---|---|---|---|---|
| 11. | ಕೊಡಗು | 16 | 16 | 11 | 12 | 13 |
| 12. | ಹಾಸನ | 38 | 37 | 24 | 29 | 0 |
| 13. | ಚಿಕ್ಕಮಗಳೂರು | 32 | 32 | 20 | 16 | 4 |
| 14. | ದಕ್ಷಿಣ ಕನ್ನಡ | 17 | 17 | 13 | 7 | 0 |
| 15. | ಉಡುಪಿ | 9 | 9 | 5 | 0 | 0 |
| 16. | ಧಾರವಾಡ | 14 | 14 | 3 | 0 | 0 |
| 17. | ಗದಗ | 11 | 11 | 4 | 0 | 0 |
| 18. | ಹಾವೇರಿ | 19 | 19 | 12 | 0 | 6 |
| 19. | ಉತ್ತರ ಕನ್ನಡ | 35 | 35 | 25 | 13 | 0 |
| 20. | ಬೆಳಗಾವಿ | 35 | 35 | 09 | 3 | 31 |
| 21. | ಬಿಜಾಪುರ | 18 | 18 | 0 | 0 | 0 |
| 22. | ಬಾಗಲಕೋಟೆ | 18 | 18 | 0 | 0 | 21 |
| 23. | ರಾಯಚೂರು | 37 | 37 | 32 | 29 | 19 |
| 24. | ಕೊಪ್ಪಳ | 20 | 20 | 10 | 7 | 0 |
| 25. | ಬಳ್ಳಾರಿ | 27 | 27 | 14 | 15 | 12 |
| 26. | ಗುಲ್ಬರ್ಗಾ | 48 | 48 | 35 | 23 | 0 |
| 27. | ಬೀದರ್ | 30 | 30 | 20 | 7 | 8 |
| | ಒಟ್ಟು | 745 | 744 | 372 | 284 | 200 |

ಅನುಬಂಧ –2

ದೂರವಾಣಿ ಮತ್ತು ಇಂಟರ್ನೆಟ್ ಸೌಲಭ್ಯ ಹೊಂದಿರುವ ರೈತ ಸಂಪರ್ಕ ಕೇಂದ್ರಗಳ ಜಿಲ್ಲಾವಾರು ವಿವರ

| 1 | 2 | 3 | 4 | 5 |
|---|---|---|---|---|
| ಕ್ರ ಸಂ. | ಜಿಲ್ಲೆ | ರೈತ ಸಂಪರ್ಕ ಕೇಂದ್ರಗಳ ಸಂಖ್ಯೆ | ದೂರವಾಣಿ ಹೊಂದಿರುವ ರೈತ ಸಂಪರ್ಕ ಕೇಂದ್ರಗಳ ಸಂಖ್ಯೆ | ಇಂಟರ್ನೆಟ್ ಸೌಲಭ್ಯ ಹೊಂದಿರುವ ಕೇಂದ್ರಗಳ ಸಂಖ್ಯೆ |
| 1. | ಬೆಂಗಳೂರು (ನ) | 17 | 1 | 0 |
| 2. | ಬೆಂಗಳೂರು (ಗ್ರಾ) | 35 | 15 | 1 |
| 3. | ಕೋಲಾರ | 53 | 28 | 0 |

| 1 | 2 | 3 | 4 | 5 |
|---|---|---|---|---|
| 4. | ತುಮಕೂರು | 50 | 17 | 5 |
| 5. | ಶಿವಮೊಗ್ಗ | 40 | 24 | 4 |
| 6. | ಚಿತ್ರದುರ್ಗ | 22 | 21 | 0 |
| 7. | ದಾವಣಗೆರೆ | 24 | 0 | 2 |
| 8. | ಮೈಸೂರು | 33 | 15 | 7 |
| 9. | ಚಾಮರಾಜನಗರ | 16 | 12 | 4 |
| 10. | ಮಂಡ್ಯ | 31 | 21 | 1 |
| 11. | ಕೊಡಗು | 16 | 0 | 4 |
| 12. | ಹಾಸನ | 38 | 38 | 5 |
| 13. | ಚಿಕ್ಕಮಗಳೂರು | 32 | 22 | 0 |
| 14. | ದಕ್ಷಿಣ ಕನ್ನಡ | 17 | 8 | 5 |
| 15. | ಉಡುಪಿ | 9 | 5 | 3 |
| 16. | ಧಾರವಾಡ | 14 | 3 | 0 |
| 17. | ಗದಗ | 11 | 8 | 1 |
| 18. | ಹಾವೇರಿ | 19 | 13 | 0 |
| 19. | ಉತ್ತರ ಕನ್ನಡ | 35 | 33 | 0 |
| 20. | ಬೆಳಗಾವಿ | 35 | 18 | 6 |
| 21. | ಬಿಜಾಪುರ | 18 | 1 | 0 |
| 22. | ಬಾಗಲಕೋಟೆ | 18 | 11 | 0 |
| 23. | ರಾಯಚೂರು | 37 | 9 | 0 |
| 24. | ಕೊಪ್ಪಳ | 20 | 12 | 1 |
| 25. | ಬಳ್ಳಾರಿ | 27 | 6 | 0 |
| 26. | ಗುಲ್ಬರ್ಗಾ | 48 | 4 | 5 |
| 27. | ಬೀದರ್ | 30 | 0 | 2 |
| | ಒಟ್ಟು | 745 | 345 | 56 |

ರಾಜ್ಯದಲ್ಲಿ ತೋಟಗಾರಿಕಾ ಉತ್ಪನ್ನಗಳ ರಫ್ತು ವಲಯಗಳ ಬಗ್ಗೆ

4199 (4873) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?